# ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ. ಗೋವಿಂದರಾಜು ಇವರು ನಿಯಮ 72 ರ ಅಡಿಯಲ್ಲಿ ಸಲ್ಲಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

**ಪ್ರಶ್ನೆ:**

ಕೋಲಾರ ನಗರದಲ್ಲಿ 1948ರಲ್ಲಿ ಅಂದು ಮಹಾರಾಜರಾಗಿದ್ದ ಶ್ರೀಕೃಷ್ಣರಾಜಒಡೆಯರ್‌ರವರು ಇಲ್ಲಿನ ಮಕ್ಕಳ ಉನ್ನತ ಶಿಕ್ಷಣಕ್ಕಾಗಿ, ಸರ್ಕಾರಿ ಬಾಲಕರ ಕಾಲೇಜನ್ನು ಪ್ರಾರಂಭಿಸಿರುತ್ತಾರೆ. ಆದರೆ ಈ ಕಾಲೇಜಿಗೆ ಪೀಠೋಪಕರಣ, ಉತ್ತಮವಾದ ಸ್ವಚ್ಛತೆಯುಳ್ಳ ಕೊಠಡಿಗಳು, ಉಪನ್ಯಾಸಕರ ಕೊರತೆ ಹಾಗೂ ಇನ್ನಿತರ ಮೂಲಭೂತ ಸೌಲಭ್ಯಗಳಿಲ್ಲದೆ, ಕಾಲೇಜು ತುಂಬಾ ಹೀನಾಯ ಪರಿಸ್ಥಿತಿಯನ್ನು ಹೊಂದಿದೆ. ಸುಮಾರು 75 ವರ್ಷ ಇತಿಹಾಸವುಳ್ಳ ಈ ಕಾಲೇಜಿಗೆ ಕನಿಷ್ಠ ಸೌಲಭ್ಯಗಳಿಲ್ಲದೆ, ಸುಣ್ಣಬಣ್ಣವಿಲ್ಲದೆ, ಕಾಂಪೌಂಡ್ ಇಲ್ಲದೆ, ಉಪನ್ಯಾಸಕರಿಲ್ಲದಿರುವುದರಿಂದ, ಸದರಿ ಕಾಲೇಜನ್ನು ಉನ್ನತೀಕರಿಸಿ ಮೇಲ್ದರ್ಜೆಗೇರಿಸುವ ಕುರಿತು ಗಮನ ಸೆಳೆದಿರುವ ಬಗ್ಗೆ.

**ಉತ್ತರ:**

ಕೋಲಾರದ ಸರ್ಕಾರಿ ಬಾಲಕರ ಕಾಲೇಜನ್ನು 1948ರಲ್ಲಿ ಪ್ರಾರಂಭಿಸಲಾಗಿದ್ದು, ಬಿಎ, ಬಿಕಾಂ, ಬಿಎಸ್ಸಿ. ಬಿಸಿಎ & ಬಿಎಸ್‌ಡಬ್ಲ್ಯೂ ಕೋರ್ಸುಗಳನ್ನೊಳಗೊಂಡಂತೆ 1554 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಸದರಿ ಕಾಲೇಜಿಗೆ ಪೀಠೋಪಕರಣ ಹಾಗೂ ಮೂಲಭೂತ ಸೌಲಭ್ಯಗಳಿಗಾಗಿ ಬಿಡುಗಡೆ ಮಾಡಿರುವ ಅನುದಾನದ ಮಾಹಿತಿಯನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ. ಕಾಲೇಜು ಈಗಾಗಲೇ ಸ್ವಂತ ಕಟ್ಟಡ ಹೊಂದಿದ್ದು, ವಿದ್ಯಾರ್ಥಿಗಳ ಸಂಖ್ಯೆಗಳಿಗನುಗುಣವಾಗಿ ಕೊಠಡಿಗಳಿರುತ್ತವೆ. ಇದಲ್ಲದೇ 2015-16ನೇ ಸಾಲಿನಲ್ಲಿ ತರಗತಿ ಕೊಠಡಿಗಳ ನಿರ್ಮಾಣಕ್ಕಾಗಿ ರೂ.85.00 ಲಕ್ಷಗಳು, 2018-19ನೇ ಸಾಲಿನಲ್ಲಿ ರೂ.200.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿರುತ್ತದೆ. 2014-15ನೇ ಸಾಲಿನಲ್ಲಿ ಸದರಿ ಕಾಲೇಜಿನ ಸುಣ್ಣಬಣ್ಣ ಹಾಗೂ ವಿವಿಧ ದುರಸ್ಥಿ ಕಾರ್ಯಗಳಿಗಾಗಿ ರೂ.30.00 ಲಕ್ಷಗಳು ಮತ್ತು 2018-19ನೇ ಸಾಲಿನಲ್ಲಿ ರೂ.20.50 ಲಕ್ಷಗಳ ಅನುದಾನವನ್ನು ಇದಲ್ಲದೆ, ರೂಸಾ 1.0 ಯೋಜನೆಯಡಿಯಲ್ಲಿ ಉನ್ನತೀಕರಣ/ನವೀಕರಣಕ್ಕಾಗಿ ರೂ.70.00 ಲಕ್ಷಗಳು, ಹೊಸ ತರಗತಿ ಕೊಠಡಿ ರೂ.70.00 ಲಕ್ಷಗಳು ಮತ್ತು ರೂ.60.00 ಲಕ್ಷಗಳನ್ನು ಉಪಕರಣ/ಸಲಕರಣೆಗಳಿಗಾಗಿ ಒದಗಿಸಲಾಗಿರುತ್ತದೆ. ಸದರಿ ಕಾಲೇಜಿನ ಇನ್ನಿತರ ಮೂಲಭೂತ ಸೌಲಭ್ಯಗಳಾದ ಪ್ರಯೋಗಾಲಯ ನಿರ್ಮಾಣಕ್ಕಾಗಿ ರೂ.70.00 ಲಕ್ಷಗಳು ಹಾಗೂ ಮಹಿಳಾ ಶೌಚಾಲಯದೊಂದಿಗೆ ವಿಶ್ರಾಂತಿ ಕೊಠಡಿ ನಿರ್ಮಾಣಕ್ಕಾಗಿ ರೂ.30.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ, ಮಾಹಿತಿಯನ್ನು (ಅನುಬಂಧ-2)ರಲ್ಲಿ ಲಗತ್ತಿಸಿದೆ. ಕೋಲಾರ ನಗರದ ಬಾಲಕರ ಕಾಲೇಜಿಗೆ ಸಂಪೂರ್ಣವಾದ ಕಾಂಪೌಂಡ್ ಇರುತ್ತದೆ. ಈ ಮಧ್ಯೆ ಕೋಲಾರ ನಗರದಲ್ಲಿ ಹಾದುಹೋಗುತ್ತಿರುವ ಬಂಗಾರಪೇಟೆ–ಬಾಗೇಪಲ್ಲಿ ರಸ್ತೆ ರಾಜ್ಯ ಹೆದ್ದಾರಿ-5ರ ಭಾಗವಾದ ಹಾಸ್ಪಿಟಲ್ ವೃತ್ತದಿಂದ ಮೆಕ್ಕೆ ವೃತ್ತದವರೆಗೆ ನಾಲ್ಕುಪಥಗಳ ರಸ್ತೆ ನಿರ್ಮಾಣಕ್ಕೆ ಸರ್ಕಾರದಿಂದ ಅನುಮೋದನೆಯಾಗಿದ್ದು, ಅದರಂತೆ ಸದರಿ

-----2

ಕಾಲೇಜಿಗೆ ಸಂಬಂಧಿಸಿದ ಕಟ್ಟಡದ ಪೂರ್ವ ಭಾಗದ ಹಾಲಿ ಆವರಣ ಗೋಡೆಯನ್ನು ಲೋಕೋಪಯೋಗಿ ಇಲಾಖೆ ಉಪವಿಭಾಗ, ಕೋಲಾರ ಇವರು ಕೆಡವಿ ಹಾಕಿ 2 ಮೀಟರ್ ಹಿಂದಕ್ಕೆ ನಿರ್ಮಿಸಲು ಆದೇಶಿಸಿರುತ್ತಾರೆ. ಈ ಸಂಬಂಧದಲ್ಲಿ, ಸದರಿ ಆವರಣ ಗೋಡೆಯನ್ನು ಜಿಲ್ಲಾಡಳಿತದ ವತಿಯಿಂದ ಅನುದಾನವನ್ನು ಪಡೆಯಲು ಮುಂದಿನ ಕ್ರಮವಹಿಸುವಂತೆ, ಸದರಿ ಕಾಲೇಜಿನ ಪ್ರಾಂಶುಪಾಲರಿಗೆ ಈಗಾಗಲೇ ನಿರ್ದೇಶಿಸಲಾಗಿದ್ದು, ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಇಲಾಖಾವತಿಯಿಂದ ಅಗತ್ಯ ಕ್ರಮಕೈಗೊಳ್ಳಲಾಗಿದೆ.

ಕೋಲಾರದ ಸರ್ಕಾರಿ ಬಾಲಕರ ಕಾಲೇಜಿನಲ್ಲಿ ವಿವಿಧ ವಿಷಯಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳೂ ಒಳಗೊಂಡಂತೆ, ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ 1242 ಉಪನ್ಯಾಸಕರ ಹುದ್ದೆಗಳನ್ನು ಯು.ಜಿ.ಸಿ. ನಿಯಮಗಳನ್ವಯ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರವು ಅಂತಿಮ ವಿಶೇಷ ನೇಮಕಾತಿ ನಿಯಮಾವಳಿಗಳನ್ನು ರೂಪಿಸಿ, ಸದರಿ ವಿಶೇಷ ನೇಮಕಾತಿ ನಿಯಮಗಳನ್ವಯ ಉಪನ್ಯಾಸಕರ ಹುದ್ದೆಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಭರ್ತಿಮಾಡಲು ದಿನಾಂಕ:26.08.2021 ರ ಸಂಖ್ಯೆ:ಇಡಿ/257/ಡಿಸಿಇ/2019ರಲ್ಲಿ ಅಧಿಸೂಚನೆ ಹೊರಡಿಸಿದ್ದು, ಅದರಂತೆ ಆಯ್ಕೆ ಪ್ರಾಧಿಕಾರವಾದ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿ, ಅಧಿಸೂಚನೆ ಹೊರಡಿಸಿದೆ. ಉಪನ್ಯಾಸಕರ ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಆಯ್ಕೆ ಮಾಡಿದ ಅಭ್ಯರ್ಥಿಗಳ ಆಯ್ಕೆಪಟ್ಟಿಯನ್ನು ಸರ್ಕಾರ/ಇಲಾಖೆಗೆ ನೀಡಿದ ನಂತರ, ಸದರಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ನಿಯಮಾನುಸಾರ ಕ್ರಮ ವಹಿಸಲಾಗುವುದು.

ಆದಾಗ್ಯೂ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕೋಲಾರದ ಸರ್ಕಾರಿ ಬಾಲಕರ ಕಾಲೇಜಿನಲ್ಲಿ ವಿವಿಧ ವಿಷಯಗಳಲ್ಲಿ ಖಾಲಿ ಇರುವ/ಕೊರತೆ ಇರುವ ಉಪನ್ಯಾಸಕರ ಬೋಧನಾ ಕಾರ್ಯಭಾರವನ್ನು ನಿರ್ವಹಿಸಲು, ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಂಡು ಪಾಠ-ಪ್ರವಚನಗಳನ್ನು ನಡೆಸಲಾಗುತ್ತಿದೆ.

ಸಂಖ್ಯೆ: ಇಡಿ 28 ಹೆಚ್‌ಪಿಸಿ 2022

(ಡಾ: ಅಶ್ವತ್ಥ ನಾರಾಯಣ ಸಿ.ಎನ್)
ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು
ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು
ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು.

# ಅನುಬಂಧ-1

## ಸರ್ಕಾರಿ ಬಾಲಕರ ಕಾಲೇಜು, ಕೋಲಾರ ಈ ಕಾಲೇಜಿಗೆ ಪೀಠೋಪಕರಣ, ಪಠ್ಯಪುಸ್ತಕ, ಕಛೇರಿ ಮತ್ತು ಇತರೆ ವೆಚ್ಚಗಳಿಗೆ ಬಿಡುಗಡೆ ಮಾಡಿರುವ ಅನುದಾನದ ವಿವರ.

(ರೂ.ಗಳಲ್ಲಿ)

| ಕ್ರ. ಸಂ. | ಕಾಲೇಜಿನ ಹೆಸರು | 2019-2020 | | | 2020-21 | 2021-22 |
|---|---|---|---|---|---|---|
| | | ಪೀಠೋ ಪಕರಣ | ಪಠ್ಯಪು ಸ್ತಕ | ಕಛೇರಿ ವಿದ್ಯುತ್ ನೀರು ದೂರವಾಣಿ ಮತ್ತು ಇತರೆವೆಚ್ಚ | ಕಛೇರಿ ವೆಚ್ಚ, ಪಠ್ಯಪುಸ್ತಕ, ಪೀಠೋಪಕರಣ ಮತ್ತು ಇತರೆ ವೆಚ್ಚ | ಕಛೇರಿ ವೆಚ್ಚ, ಪಠ್ಯಪುಸ್ತಕ, ಪೀಠೋಪಕರಣ ಮತ್ತು ಇತರೆ ವೆಚ್ಚ |
| 1 | ಸರ್ಕಾರಿ ಬಾಲಕರ ಕಾಲೇಜು, ಕೋಲಾರ | 95000 | 38850 | 203000 | 158490 | 84650 |

# ಅನುಬಂಧ-2

## 2018-19ನೇ ಸಾಲಿನಿಂದ ಸರ್ಕಾರಿ ಬಾಲಕರ ಕಾಲೇಜು ಕೋಲಾರ ಈ ಕಾಲೇಜಿಗೆ ಅನುಮೋದನೆಯಾಗಿರುವ ಕಾಮಗಾರಿಗಳ/ಅನುದಾನದ ವಿವರ

(ರೂ.ಗಳಲ್ಲಿ)

| Sl. No | Constituency | Dist | Taluk | Name & address of the College | Est Cost | AA Revised Est Cost | HOA | Work Details | Agency | Sanct Year | Total Release | Balance | Phy Progress |
|---|---|---|---|---|---|---|---|---|---|---|---|---|---|
| 1 | Kolar | Kolar | Kolar | Govt. Boys College, Kolar | 200.00 | 200.00 | General | Add C R | RITES | 2018-19 | 190.00 | 10.00 | FF Rising columns in progress |
| 2 | Kolar | Kolar | Kolar | Govt. Boys College, Kolar | 70.00 | 70.00 | General | Lab Build | RITES | 2018-19 | 70.00 | 0.00 | FF Rising columns in progress |
| 3 | Kolar | Kolar | Kolar | Govt. Boys College, Kolar | 30.00 | 30.00 | General | Ladies R R | RITES | 2018-19 | 28.50 | 1.50 | FF Rising columns in progress |